ತಾರೀಖು 7ನೆ ಸೆಪ್ಟಂಬರ್ 1904.

ನಂ. ರೆ. 2157 — ಫಾ. 19—03-3, ಸ|| 1897ನೆ ಇಸವಿಯ ನವಂಬರ್ 6ನೆ ಮಾರ್ಕ್ಕಂ 4098—ಫಾ. ಫೈ. 40—95ನೆ ನಂಬರ್ ಇಸ್ತಿಹಾರ್ನಾವೆಯಿಂದ 1878ನೆ ಇಸವಿಯ ಫಾರೆಸ್ಟ್ ರೂಲುಗಳ 16ನೆ ಸೆಕ್ಷನಿನ ನಿಯಮಗಳನುಸರಿಸಿ ಪ್ಯೂಯಲ್ ರಿಜರ್ವಾಗಿ ಫಾರೆಸ್ಟ್ ಕ್ಲಸರ್ವೇಟರವರ ಅಧಿಕಾರದಲ್ಲಿಯೂ ಮತ್ತು ಆಡಳಿತದಲ್ಲಿಯೂ ಇಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ತಾಲ್ಲೂಕಿನಲ್ಲಿರುವ ಬುಟ್ಟಗುಂಡೀಯನ ಬೆಟ್ಟವಾದ ಡಿಸ್ಟ್ರಿಕ್ಟ್ ಫಾರೆಸ್ಟ್ ರವಿನ್ಯೂ ಇಲಾಖೆಯ ಅಧಿಕಾರಕ್ಕೆ ಇದರಿಂದ ಪುನಃ ಇಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ಹ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

---

## ಮುಜರೈ.

## ಇಸ್ತಿಹಾರ್ನಾಮಾ.

ತಾರೀಖು 9ನೆ ಸೆಪ್ಟಂಬರ್ 1904.

ನಂ. 1012 ಹುಜು. ಫೈ. 54—01, ಸ|| 1894ನೆ ಏಪ್ರಿಲ್ 27ನೆ ಮಾರ್ಕ್ಕಂ 935ನೆ ನಂಬರ್ ಇಸ್ತಿಹಾರ್ನಾವೆಯಲ್ಲಿ ಮೊಕರರ್ರಾಡಲ್ಪಟ್ಟವರಿಗೆ ಬದಲಾಗಿ ಇದರಡಿ ಕಂಡ ಜನಗಳು ಮಾಗಡಿ ತಾಲ್ಲೂಕಿನ ಸಾಜನದುರ್ಗದಲ್ಲಿರುವ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಜಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

1. ಮು|| ರಾ|| ರಾ|| ಚನ್ನಪ್ಪನವರು. | 2. ಮು|| ರಾ|| ರಾ|| ಪಟೀಲ್ ಚಿಕ್ಕ ಈರೇಗೌಡರು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಸೆಕ್ರಿಟರಿ.